**ಓ ಎಸ್ ನಂಃ 116/2016**
**ಡಿ ಡಬ್ಲ್ಯೂ ಃ 2**

**ದಿಃ 09.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ ವಿ ಕೆ ವಕೀಲರಿಂದಃ-**

ನಿಡಿ 14 ರ ಅಸಲು ಕ್ರಯ ಪತ್ರವನ್ನು ತಾವಾಗಲಿ ಅಥವಾ ಡಿ ಡಬ್ಲ್ಯೂ 1 ಆಗಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಸದರಿ ಕ್ರಯ ಪತ್ರವು ಅರಸಮ್ಮನವರ ಬಳಿ ಇದ್ದು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆವು. ದೋಣೇನಹಳ್ಳಿ ಗ್ರಾಮ ನನಗೆ ಗೊತ್ತು. ಸದರಿ ಗ್ರಾಮದಲ್ಲಿ 40 ಕುಟುಂಬಗಳು ಇವೆ. 40 ಕುಟುಂಬಗಳ ಸದಸ್ಯರ ಪರಿಚಯ ನನಗೆ ಇದೆ. ದಾವಾ ಸ್ವತ್ತಿನಲ್ಲಿ ತಾವಾಗಲಿ ಅಥವಾ ಮುತ್ತಯ್ಯನವರಾಗಲಿ ಸ್ವಾಧೀನದಲ್ಲಿದ್ದೀರಿ ಎಂದು ತೋರಿಸಲು ಯಾರಾದರೂ ಸಾಕ್ಷಿದಾರರನ್ನು ಕರೆಸಿ ವಿಚಾರಣೆ ಮಾಡಿಸುತ್ತೀರ ಎಂದರೆ ವಾದಿಗಳಿಂದ ಭಯ ಇರುವ ಕಾರಣ ಯಾರು ಬಂದು ಸಾಕ್ಷ್ಯ ನುಡಿಯುವುದಿಲ್ಲ. ತಮ್ಮ ಕುಟುಂಬದ ಅರ್ಧದಷ್ಟು ಸದಸ್ಯರು ವಾದಿಯ ಕುಟುಂಬದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಡಿ 11 ರ ವಂಶವೃಕ್ಷವನ್ನು ಯಾರು ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಗಾಳಪ್ಪ ಮತ್ತು ಅರಸಮ್ಮನವರ ಕುಟುಂಬಗಳು ಸೇರಿ ಮಾಡಿರುತ್ತಾರೆ. ನಿಡಿ 11 ರ ವಂಶವೃಕ್ಷವನ್ನು ಯಾರು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 11 ರ ವಂಶವೃಕ್ಷವನ್ನು ತಯಾರು ಮಾಡಿಸಿರುವವರು ಗಾಳಪ್ಪ ಎಂದರೆ ಸರಿ. ನಿಡಿ 11 ರ ವಂಶವೃಕ್ಷದಲ್ಲಿ ಕೆಂಪಯ್ಯ ಮತ್ತು ಗಾಳಪ್ಪನವರು ಮುತ್ತಯ್ಯನವರ ಸಾಕು ಮಕ್ಕಳು ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಕೆಂಪಯ್ಯ ಮತ್ತು ಗಾಳಪ್ಪನವರು ಮುತ್ತಯ್ಯನವರ ದತ್ತು ಮಕ್ಕಳು ಎಂದು ನಮೂದು ಮಾಡಿದ್ದೀರಿ ಎಂದರೆ ಸರಿ. ಕೆಂಪಯ್ಯ ಮತ್ತು ಗಾಳಪ್ಪನವರು ಮುತ್ತಯ್ಯನವರ ದತ್ತು ಮಕ್ಕಳು ಎಂದು ತೋರಿಸಲು ನ್ಯಾಯಾಲಯಕ್ಕೆ ತಾವು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಮರಣ ಶಾಸನ ಪತ್ರವನ್ನು ಹಾಜರುಪಡಿಸಿದ್ದೇನೆ. ನಿಡಿ 75 ರ ಮರಣ ಶಾಸನ ಪ್ರಮಾಣ ಪತ್ರದಲ್ಲಿ ಕೆಂಪಯ್ಯ ಮತ್ತು ಗಾಳಪ್ಪನವರು ಮುತ್ತಯ್ಯನವರ ದತ್ತು ಮಕ್ಕಳು ಎಂದು ಎಲ್ಲೂ ನಮೂದಾಗಿಲ್ಲ ಎಂದರೆ ಸರಿಯಲ್ಲ. ಮುತ್ತಯ್ಯನವರು ತನ್ನ ಜೀವಿತಾವಧಿಯಲ್ಲಿ ಮಾಯಸಂದ್ರ ಗ್ರಾಮದಲ್ಲಿ ವಾಸವಿದ್ದರು. ಈಗಲೂ ಮುತ್ತಯ್ಯನವರನ್ನು ಲೇವಾದೇವಿ ಮುತ್ತಯ್ಯ ಎಂಬ ಹೆಸರಿನಿಂದ ಸಹ ಕರೆಯುತ್ತಾರೆ ಎಂದರೆ ಸರಿಯಲ್ಲ. ಮುತ್ತಯ್ಯನವರು ತಾವರೆಕೆರೆ ಹೋಬಳಿಯಲ್ಲಿ ಬಡ್ಡಿ

ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮುತ್ತಯ್ಯನವರು ದಿಃ 23.06.1990 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ದಿಃ 23.06.1990 ರಿಂದ 2006 ನೇ ಸಾಲಿನ ತನಕ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತಾವಾಗಲಿ ಅಥವಾ ಕೆಂಪಯ್ಯನವರ ಕುಟುಂಬದವರಾಗಲಿ ಖಾತೆ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಾವು 2006 ನೇ ಸಾಲಿನಲ್ಲಿ ಖಾತೆ ಮಾಡಿಸಿಕೊಂಡಿರುತ್ತೇವೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಾವು ಖಾತೆಯನ್ನು ಕ್ರಯ ಪತ್ರ ಹಾಗೂ ಮರಣ ಶಾಸನ ಪತ್ರದ ಆಧಾರದ ಮೇಲೆ ಮಾಡಿಸಿಕೊಂಡಿರುತ್ತೇವೆ. ಮರಣ ಶಾಸನ ಪತ್ರದಲ್ಲಿ ದಾವಾ ಸ್ವತ್ತಿನ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ಕೈ ತಪ್ಪಿನಿಂದ ತಪ್ಪಿ ಹೋಗಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮರಣ ಶಾಸನ ಪತ್ರದಲ್ಲಿ ಕೈ ತಪ್ಪಿನಿಂದ ಬಿಟ್ಟು ಹೋಗಿದೆ ಎಂದು ಮತ್ತು ದಾವಾ ಸ್ವತ್ತು ತಮಗೆ ಸೇರಿದ್ದು ಎಂದು ತಾವು ಯಾವುದೇ ದಾವೆಯನ್ನು ಯಾವುದೇ ನ್ಯಾಯಾಲಯದಲ್ಲಿ ತಾವು ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ಮುತ್ತಯ್ಯನವರು ವಾದಿಯ ಮಾವನವರಿಂದ ಹಣ ಮತ್ತು ಬಡ್ಡಿಯನ್ನು ವಾಪಸ್ಸು ಪಡೆದು ಅಸಲು ಕ್ರಯ ಪತ್ರವನ್ನು ವಾದಿಯ ಮಾವನವರಿಗೆ ನೀಡಿರುವುದರಿಂದ ಮುತ್ತಯ್ಯನವರು ದಾವಾ ಸ್ವತ್ತನ್ನು ನಿಡಿ 75 ರ ಮರಣ ಶಾಸನ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮುತ್ತಯ್ಯನವರಿಗೆ ಮಾಲೀಕತ್ವದ ಹಕ್ಕು ಇಲ್ಲದೆ ಇರುವುದರಿಂದ ನಿಡಿ 75 ರ ಮರಣ ಶಾಸನ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಡಿ 7 ರ ವಿಭಾಗ ಪತ್ರದಲ್ಲಿರುವ ಒಕ್ಕಣೆಯ ಅಂಶಗಳು ನನಗೆ ಗೊತ್ತಿದೆ. ನಿಡಿ 7 ರ ವಿಭಾಗ ಪತ್ರದಲ್ಲಿ ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡಿರುವ ಬಗ್ಗೆ ಉಲ್ಲೇಖ ಇದೆ ಎಂದರೆ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಡಿ 7 ರ ವಿಭಾಗ ಪತ್ರದಲ್ಲಿ ಸಹ ತಾವು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದೀರಿ ಎಂದು ಒಕ್ಕಣೆ ಇಲ್ಲ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ತಾವಾಗಲಿ, ತಮ್ಮ ತಂದೆಯವರಾಗಲಿ ಅಥವಾ ಮುತ್ತಯ್ಯನವರಾಗಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವತ್ತೂ ಸಹ ಮಾಲೀಕತ್ವದ ಹಕ್ಕು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 108/2008 ರ ದಾವೆಯನ್ನು ಯಾವ ಉದ್ದೇಶಕ್ಕಾಗಿ ಯಾರು ಸಲ್ಲಿಸಿರುತ್ತಾರೆ ಎಂಬ ವಿಚಾರವನ್ನು ತಾವು ತಿಳಿದುಕೊಂಡಿದ್ದೀರ ಎಂದರೆ

ಓ ಎಸ್ ನಂಃ 116/2016
ಡಿ ಡಬ್ಲ್ಯೂ ಃ 2

ಸಾಕ್ಷಿಯು ಚನ್ನಪ್ಪ ಬಿನ್ ಐಯ್ಯಣಪ್ಪ ರವರು ಸದರಿ ದಾವೆಯನ್ನು ನಮ್ಮ ತಂದೆಯವರು ವಿರುದ್ಧ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಚನ್ನಪ್ಪನವರು ದಾವಾ ಸ್ವತ್ತು ತಮಗೆ ಸೇರಬೇಕೆಂದು ಸಲ್ಲಿಸಿರುತ್ತಾರೆ. ನಿಡಿ 17 ರ ಅಡಿಯಲ್ಲಿ ಮೊದಲನೆ ಬಾರಿಗೆ ಗಾಳಪ್ಪ ಮತ್ತು ಅರಸಮ್ಮ ನವರು ದಾವಾ ಸ್ವತ್ತಿನ ಬಗ್ಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಆ ಸಂದರ್ಭದಲ್ಲಿ ಚನ್ನಪ್ಪನವರ ಹೆಸರಿನಲ್ಲಿದ್ದ ಒಟ್ಟು ವಿಸ್ತೀರ್ಣದ ಪೈಕಿ 1 ಎಕರೆ ಜಮೀನನ್ನು ಅರಸಮ್ಮ ಮತ್ತು ಗಾಳಪ್ಪನವರು ಖಾತೆ ಮಾಡಿಸಿಕೊಂಡಿರುವ ಕಾರಣ ಪ್ರಶ್ನಿಸಿ ಚನ್ನಪ್ಪನವರು ಅಸಲು ದಾವಾ ಸಂಖ್ಯೆ 108/2008 ತಮ್ಮ ತಂದೆಯ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಸ್ವತ್ತನ್ನು ಅದಲು ಬದಲು ಮಾಡಿಕೊಂಡಿರುವ ಕಾರಣ ಸಲ್ಲಿಸಿರುತ್ತಾರೆ. ನಿಡಿ 7 ರ ವಿಭಾಗ ಪತ್ರ ಆಗುವುದಕ್ಕಿಂತ ಮುಂಚೆ ದಾವಾ ಸ್ವತ್ತು ವಾದಿಯ ಕುಟುಂಬದ ಯಾರ ಹೆಸರಿಗೆ ಹೋಗಿತ್ತು ಎಂದು ತೋರಿಸಲು ತಾವು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇವೆ. ನಿಡಿ 7 ರ ವಿಭಾಗ ಪತ್ರದ ಪ್ರಕಾರ ದಾವಾ ಸ್ವತ್ತು ವಾದಿಗಳ ಕುಟುಂಬಕ್ಕೆ ನೀಡಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತಾವು ಖಾತೆಯನ್ನು ಮೋಸದಿಂದ ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಖಾತೆ ಮಾಡಿಸಿಕೊಳ್ಳಲು ಬೇರೆ ಪ್ರಕರಣದ ಸಂಖ್ಯೆಯನ್ನು ನಮೂದು ಮಾಡಿಸಿಕೊಂಡು ಖಾತೆಯನ್ನು ಮಾಡಿಸಿಕೊಂಡಿದ್ದೀರಿ ಹೊರತು ಯಾವುದೇ ಕ್ರಯ ಪತ್ರ ಅಥವಾ ಮರಣ ಶಾಸನ ಪತ್ರದ ಮೇಲೆ ಅಲ್ಲ ಎಂದರೆ ಸರಿಯಲ್ಲ. ಮುತ್ತಯ್ಯನವರು ದಾವಾ ಸ್ವತ್ತಿಗೆ ಮಾಲೀಕರು ಆಗಿರದ ಕಾರಣ ನಿಡಿ 75 ರ ಮರಣ ಶಾಸನ ಪತ್ರದಲ್ಲಿ ದಾವಾ ಸ್ವತ್ತನ್ನು ವಿಲೇ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 75 ರ ಮರಣ ಶಾಸನ ಪತ್ರದ ಮೂಲಕ ದಾವಾ ಸ್ವತ್ತು ತಮ್ಮ ತಂದೆಯವರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**